ನಿಗೂಢತೆಯ ಬಲೆಯಲ್ಲಿ ರೈತ ಬಲಿಯಾದರೆ ಅಭಿವೃದ್ಧಿಗೆ ಭವಿಷ್ಯವಿಲ್ಲದಂತಾಗುತ್ತದೆ. ಆದ ಪ್ರಯುಕ್ತ ಸರ್ಕಾರ ಬೆಳೆದು ನೆರವಿಗೆ ನಿಂತಿರುವ ಈ ಸಿರಿ ಸಂಪತ್ತನ್ನು ಉಳಿಸಲೇಬೇಕೆಂಬ ಫಲದಿಂದಲಾದರು ಸರ್ಕಾರದ ವೆಚ್ಚದಿಂದಲೇ ನೀರು ದೊರೆಯುವ ಎಡೆಯಲ್ಲೂ ಈ ಸೀಮಿತ ತೆಂಗಿನ ಪ್ರದೇಶದಲ್ಲಿ ಕೊಳವೆ ಬಾವಿಗಳನ್ನು ತೋಡಿಸಿ ನೀರುಣಿಸಿ ರೈತನಿಗೆ ಉಪಕರಿಸಿದರೆ ರೈತನು ನಮಿಸಿ ಉದ್ಧಾರವಾಗುವನೆಂಬ ಆಶಯ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಗಳಿಂದ ಉತ್ತರವನ್ನು ತರಿಸಿಕೊಡುತ್ತೇನೆ.

XV Sanction of Posts to the office of the Deputy Director of Collegiate Education Mangalore

SRI BLASIUS M. D'SOUZA (Mangalor).—The office of the Regional Deputy Director of Collegiate Education was started at Mangalore with an intention of speedy disposal of files relating to colleges of this region. But the intention with which this office was started is not being fulfilled since the staff required to this office has not been sanctioned. There is only one Superintendent and one Clerk-*cum*-Typist which will not be sufficient. Hence, I urge the Government to sanction at least four Superintendents and four Clerks immedately in view of the density of colleges in this region.

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೆ, ಕೊಲಿಜಿಯೇಟ್ ಎಜುಕೇಷನ್ ನಿರ್ದೇಶಕರಿಗೆ ಆದೇಶ ನೀಡಿ ಅಲ್ಲಿಗೆ ಹೆಚ್ಚಿನ ಸಿಬ್ಬಂದಿ ವರ್ಗದ ಆವಶ್ಯಕತೆ ಇದೆಯೋ ಇಲ್ಲವೆ ಎಂಬ ಬಗ್ಗೆ ವರದಿ ನೀಡಬೇಕೆಂದು ತಿಳಿಸಿ ಒಂದು ವೇಳೆ ಹೆಚ್ಚಿನ ಸಿಬ್ಬಂದಿವರ್ಗದ ಅವಶ್ಯಕತೆ ಇದೆಯೆಂದು ತಿಳಿದುಬಂದರೆ ಖಂಡಿತವಾಗಿಯೂ ಮಂಜೂರು ಮಾಡಿಸಿಕೊಡುತ್ತೆನೆ.

XVI. ಬಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನಲ್ಲಿ ಮಳೆ ಬೀಳದೆ ಭೀಕರ ಪರಿಸ್ಥಿತಿ ಉಂಟಾಗಿರುವುದು

ಶ್ರೀ ಕೆ. ಬಿ. ಶಾಣಪ್ಪ (ಶಹಬಾದ್).—ಮಾನ್ಯ ಅಧ್ಯಕ್ಷರೆ, ಬಿಜಾಪುರ ಜಿಲ್ಲೆಯ ಸಿಂಧಗಿ ತಾಲೂಕಿನಲ್ಲಿ ಮಳೆ ಬೀಳದೆ ಇರುವಾಗ ಸರ್ಕಾರ ಬರಗಾಲ ಕಾಮಗಾರಿ ಕೆಲಸಗಳನ್ನು ನಿಲ್ಲಿಸಿರುವುದರಿಂದ ಜನರು ತುಂಬಾ ಕಷ್ಟದಲ್ಲಿದ್ದು ಕಾಮಗಾರಿ ಕೆಲಸಗಳನ್ನು ಮುಂದುವರೆಸುವಂತೆ ಮತ್ತು ದನಕರುಗಳಿಗೆ ಮೇವು ಒದಗಿಸಲು ಒತ್ತಾಯಿಸಿ ಸಿಂಧಗಿಯ ರೈತರು ತಾ, ೧೫-೮-೮೬ರಿಂದ ಜೈಲು ಭರೋ ಕಾರ್ಯಕ್ರಮ ನಡೆಸುತ್ತಿದ್ದಾರೆ. ತಾ. ೧೯-೮-೮೬ರಂದು ೩೨೦ ಜನ ರೈತರು ಜೈಲು ಸೇರಿದ್ದಾರೆಂದು ಟೆಲಿಗ್ರಾಂ ಬಂದಿದೆ. ಪರಿಸ್ಥಿತಿ ಭೀಕರವಾಗಿರುವುದರಿಂದ ಇದರ ಬಗ್ಗೆ ಸದನದಲ್ಲಿ ಸಂಬಂಧಪಟ್ಟ ಸಚಿವರೇ ಹೇಳಿಕೆ ನೀಡಲು ಅವಕಾಶ ಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಮಾನ್ಯ ಅಧ್ಯಕ್ಷರೆ, ಬರಗಾಲ ಪರಿಸ್ಥಿತಿಯ ಬಗ್ಗೆ ಇದೇ ತಿಂಗಳ ೪ನೇ ತಾರೀಖು ಎಲ್ಲಾ ಜಿಲ್ಲಾಧಿಕಾರಿಗಳ ಸಭೆಯನ್ನು ಕರೆದಿದ್ದೆವು. ನಮ್ಮ ರಾಜ್ಯದಲ್ಲಿ ಎಲ್ಲೆಲ್ಲಿ ಮಳೆ ಬಿದ್ದಿದೆ, ಎಲ್ಲೆಲ್ಲಿ ಬಿದ್ದಿಲ್ಲ ಎಂಬ ಮಾಹಿತಿಯನ್ನು ನಾವು ತೆಗೆದುಕೊಂಡಿದ್ದೇವೆ. ಅಲ್ಲದೆ ಈ ತಿಂಗಳ ೧೫ನೇ ತಾರೀಖಿನವರೆಗೆ ಎಲ್ಲೆಲ್ಲಿ ಮಳೆ ಬಿದ್ದಿದೆ, ಎಲ್ಲೆಲ್ಲಿ ಬಿದ್ದಿಲ್ಲ ಎಂಬ ಬಗ್ಗೆ ಸರ್ಕಾರಕ್ಕೆ ಒಂದು ವರದಿಯನ್ನು ಕಳುಹಿಸುತ್ತೇವೆಂದು ಅವರು ಹೇಳಿದ್ದಾರೆ. ಅವರ ವರದಿ ಬಂದಕೂಡಲೇ ಎಲ್ಲೆಲ್ಲಿ ಮಳೆ ಬಿದ್ದಿಲ್ಲ ಅಂಥ ಕಡೆ ಮುಂದೆ ಏನು ಸೂಕ್ತ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ಶೀಘ್ರವಾಗಿ ತೆಗೆದುಕೊಳ್ಳುವುದಕ್ಕೆ ಸರ್ಕಾರ ಸಿದ್ಧವಾಗಿದೆಯೆಂದು ಹೇಳಬಯಸುತ್ತೇನೆ.

ಶ್ರೀ ಕೆ.ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಗಳೇ ಉತ್ತರ ಹೇಳ ಬೇಕೆಂದು ನಾನು ಕೇಳಿದ್ದೇನೆ. ಸಂಬಂಧಪಟ್ಟ ಮಂತ್ರಿಯವರು ಊರಿನಲ್ಲೇ ಇದ್ದರೂ ಅವರು ಇಲ್ಲಿಬಂದು ಏತಕ್ಕೆ ಉತ್ತರವನ್ನು ಹೇಳುತ್ತಿಲ್ಲ?

ಅಧ್ಯಕ್ಷರು.—ಈಗ ತಾನೆ ಮಾನ್ಯ ಲಕ್ಷ್ಮೀಸಾಗರ್‌ರವರು ಉತ್ತರ ನೀಡಿ ಮಳೆ ಬೀಳದೇ ಇರುವ ಕಡೆ ಮುಂದೆ ಏನು ಸೂಕ್ತ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ದಯವಿಟ್ಟು ತಾವು ಕುಳಿತುಕೊಳ್ಳಿ.

ಶ್ರೀ ಕೆ.ಬಿ. ಶಾಣಪ್ಪ.—ಸ್ವಾಮಿ, ಸಂಬಂಧಪಟ್ಟ ಸಚಿವರಿಂದಲೇ ನಮಗೆ ಉತ್ತರ ಬೇಕು.

ಅಧ್ಯಕ್ಷರು.—ತಾವು ಸುಮ್ಮನೆ ಕೂಡಿ. ನಿಯಮ ೩೫ಳಿರ ಬಗ್ಗೆ ನೀವು ಮತ್ತೆ ಪ್ರಶ್ನೆ ಕೇಳುವುದಕ್ಕೆ ಬರುವುದಿಲ್ಲ. ನೀವು ಏನು ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಕೆ.ಬಿ. ಶಾಣಪ್ಪ.—ಸ್ವಾಮಿ, ನನಗೂ ಜವಾಬ್ದಾರಿ ಇದೆ.

ಶ್ರೀ ಎಸ್. ಬಂಗಾರಪ್ಪ:—ಮಾನ್ಯ ಅಧ್ಯಕ್ಷರೆ ಇದು ಏನು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಸಂಬಂಧಪಟ್ಟ ಮಂತ್ರಿಗಳು ಊರಿನಲ್ಲಿದ್ದರೂ ಅವರು ಏತಕ್ಕೆ ಇಲ್ಲಿ ಬಂದು ಉತ್ತರ ಕೊಡುವುದಿಲ್ಲ?

ಅಧ್ಯಕ್ಷರು.—ಈಗ ಮಾನ್ಯ ಲಕ್ಷ್ಮೀಸಾಗರ್‌ರವರೇ ಉತ್ತರ ಹೇಳಿದ್ದಾರೆ. ಇನ್ನು ಮುಂದೆ ಸಂಬಂಧಪಟ್ಟ ಮಂತ್ರಿಗಳೇ ಸದನದಲ್ಲಿದ್ದು ಉತ್ತರ ಕೊಡುವಂತೆ ಹೇಳುತ್ತೇನೆ.

ಶ್ರೀ ಧರ್ಮಸಿಂಗ್.—ಸ್ವಾಮಿ, ಶೂನ್ಯವೇಳೆ ಎಂದು ಇದ್ದದನ್ನು ತೆಗೆದುಹಾಕಿ ಈಗ ನಿಯಮ ೩೫ಳಿರನ್ನು ಇಟ್ಟುಕೊಂಡಿದ್ದೇವೆ...

(ಗೊಂದಲ)

ಶ್ರೀ ಧರ್ಮಸಿಂಗ್.—ಸ್ವಾಮಿ, ನಿಯಮ ೩೫ಳಿ ಎಂದು ನಾವು ಇಟ್ಟುಕೊಂಡಿರುವುದರಿಂದ ಸಂಬಂಧಪಟ್ಟ ಮಂತ್ರಿಗಳೇ ಸದನದಲ್ಲಿರಬೇಕೆಂದು ತಾವು ಅವರಿಗೆ ತಿಳಿಸಬೇಕೆಂದು ನಾನು ಹೇಳ ಬಯಸುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರ ಅಭಿಪ್ರಾಯದಂತೆ ಎಲ್ಲಾ ಮಂತ್ರಿಗಳು ಇದ್ದು ಅವರವರ ಪ್ರಶ್ನೆಗಳು ಬಂದಾಗ ಯಿದ್ದು ಇದ್ದು ತಿಳಿಸಬೇಕೆಂದು ಹೇಳಿ ತಿಳಿಸುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ ತಾವು ನಮ್ಮ ರಕ್ಷಣೆಗೆ ಬಂದಿದ್ದೀರಿ. ಪ್ರತಿಯೊಬ್ಬ ಮಾನ್ಯ ಸದಸ್ಯರು ಕೇಳತಕ್ಕಂಥ ಪ್ರಶ್ನೆಗಳಿಗೆ ಒಬ್ಬರೇ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಿರುವುದನ್ನು ನೋಡಿದರೆ ೩೫ಳಿಕ್ಕೆ ಒಬ್ಬ ಮಂತ್ರಿಗಳೆಂದು ಮಾಡಿಬಿಡಿ. ಬಿಜಾಪುರ ಸಿಂಧಗಿ ತಾಲ್ಲೂಕಿನಲ್ಲಿ ಮಳೆ ಬೀಳದೆ ಬರಗಾಲ ಇರುವಾಗ ಸರಕಾರ ಬರಗಾಲ ಕಾಮಗಾರಿ ಕೆಲಸಗಳನ್ನು ನಿಲ್ಲಿಸಿರುವುದರಿಂದ ಕಾಮಗಾರಿ ಕೆಲಸಗಳನ್ನು ಮುಂದುವರಿಸುವಂತೆಯೂ ಮತ್ತು ದನಕರುಗಳಿಗೆ ಮೇವು ಒದಗಿಸಲು ಒತ್ತಾಯಿಸಿ ಅಲ್ಲಿಯ ಜನರು ಸತ್ಯಾಗ್ರಹ ನಡೆಸಿ ಜೈಲು ಸೇರಿದ್ದಾರೆ, ಪರಿಸ್ಥಿತಿ ಭೀಕರವಾಗಿದೆ. ಮಾನ್ಯ ಸಚಿವರು ಮಳೆ ಬಂದಿದೆ ನೋಡುತ್ತೇನೆಂದು ಹೇಳಿದರೆ ಏನು ಅರ್ಥ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಮಳೆ ಬಾರದೆ ಇರುವ ಕಡೆಗಳಲ್ಲಿ ಮುಂದಿನ ಕಾರ್ಯಕ್ರಮದ ಬಗ್ಗೆ ಸರ್ಕಾರವು ಬೇಗನೆ ಕ್ರಮ ತೆಗೆದುಕೊಳ್ಳುತ್ತದೆಂದು ಹೇಳಿದ್ದೇನೆ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಸಚಿವರು ಸರಿಯಾದ ಉತ್ತರವನ್ನು ಕೊಟ್ಟಿರುತ್ತಾರೆ. ಇದಕ್ಕಿಂತಲೂ ಇನ್ನು ಯಾವ ರೀತಿ ಉತ್ತರವನ್ನು ಕೊಡಬೇಕು ?

ಶ್ರೀ ಕೆ.ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ಈ ಸಭೆಯ ಡೆಕೋರಮ್ ಡಿಗ್ನಿಟಿಯನ್ನು ತಮ್ಮಂಥ ಅಧ್ಯಕ್ಷರು ಇರುವಾಗ ಉಭಯತ್ರರು ಪಾಲಿಸತಕ್ಕಂಥದ್ದು ನಮ್ಮ ಕರ್ತವ್ಯವಾಗಿರುತ್ತದೆ. ಈ ಸಭೆಯಲ್ಲಿ ೩೫ಳಿ ಏತಕ್ಕೆ ? ಮಾನ್ಯ ಮಂತ್ರಿಯವರು ಅಧಿಕಾರಿಗಳಿಗೆ ತಿಳಿಸಿದರೆ ಸಾಕಾಗುತ್ತದೆ. ಆದರೆ ಸಂಬಂಧಪಟ್ಟ ಮಂತ್ರಿಗಳು ಇಲ್ಲದಿರುವಾಗ ಬೇರೆಯವರು ಉತ್ತರವನ್ನು ಹೇಳುವುದಾದರೆ ಮನೆಯಲ್ಲೇ ಕುಳಿತು ಪತ್ರ ಬರೆದರು ಉತ್ತರ ಬರುತ್ತದೆ. ಲೆಜಿಸ್ಲೇಚರ್‌ನಲ್ಲಿ ಶಾಸಕರಾಗಿದ್ದು ಪ್ರಶ್ನೆಗಳನ್ನು ಕೇಳಿದರೆ ಉತ್ತರ ಕೊಡದಿದ್ದರೆ ಏನು ಅರ್ಥ ?

ಅಧ್ಯಕ್ಷರು.—ಅದನ್ನು ನೋಡುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಕೇಳುವ ಪ್ರಶ್ನೆಗಳಿಗೆ ಉತ್ತರ ಗಳನ್ನು ಕೊಡಲು ಸಂಬಂಧಪಟ್ಟ ಎಲ್ಲಾ ಮಂತ್ರಿಗಳು ಇರಬೇಕೆಂದು ಆಜ್ಞೆ ಮಾಡುತ್ತೇನೆ.

XVII ಬೆಳ್ತಂಗಡಿ ತಾಲ್ಲೂಕು ವೇಣೂರು ಪೋಲೀಸ್ ಠಾಣೆಯಲ್ಲಿರುವ ಸಬ್‌ಇನ್ಸ್‌ಪೆಕ್ಟರ್ ಅವರ ಕಾರ್ಯವೈಖರಿ

ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಅಧ್ಯಕ್ಷರೇ ನನ್ನ ಕ್ಷೇತ್ರವಾದ ಬೆಳ್ತಂಗಡಿ ತಾಲ್ಲೂಕಿನ ವೇಣೂರು ಪೋಲೀಸ್ ಠಾಣೆಯಲ್ಲಿ ಶ್ರೀ ನೀಲಕಂಠ ಎಂಬುವರು ಎಸ್.ಐ. ಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಸದರಿಯವರ ಕಾರ್ಯವೈಖರಿ ಬಹಳ ವಿಚಿತ್ರವಾದದ್ದು. ಸ್ಟೇಷನ್ನಿಗೆ ಅರ್ಜಿ ತಂದು ಕೊಡುವಾಗ ಅರ್ಜಿಯೊಂದಿಗೆ ನೋಟೀಸ್ ಕವರು ಇರದಿದ್ದಲ್ಲಿ ಅರ್ಜಿಯನ್ನು ತಿರಸ್ಕರಿಸುತ್ತಾರೆ. ಅದಿಲ್ಲದೇ ಹೋದರೆ ಕನಿಷ್ಟ ಒಂದು ಬಾಟ್ಲಿ ವಿಸ್ಕಿಯನ್ನಾದರೂ ಕೊಡಬೇಕು. ಆದಾದನಂತರ ಯಾರ ಮೇಲೆ ಅರ್ಜಿ ಕೊಟ್ಟಿದ್ದಾರೋ ಅಲ್ಲಿಗೆ ಅವರೇ ಸ್ವತಃ ಬಾಡಿಗೆ ಕಾರು ಮಾಡಿ ಕೊಂಡು ಹೋಗಿ ಇಳಿದ ಕೂಡಲೇ ಕಾರಿನ ಬಾಡಿಗೆ ೩೦೦ ರೂಪಾಯಿಗಳು ಕೊಡು ಎಂದುಹೇಳಿ ಅದನ್ನು ಪಡೆದಾದ ನಂತರ ನಿನ್ನಮೇಲೆ ಬೇರೆಯವರು ಅರ್ಜಿ ಸಲ್ಲಿಸಿರುತ್ತಾರೆ. ಅವನು ಅರ್ಜಿಯೊಂದಿಗೆ ರೂ. ೫೦೦ನ್ನು ಕೊಟ್ಟಿರುತ್ತಾನೆ. ನೀನು ಎಷ್ಟುಕೊಡುತ್ತೀಯಾ ಎಂದು ಗದರಿಸಿ ಅವನಿಂದ ಹೆಚ್ಚು ಹಣವನ್ನು ಪಡೆದು ವಾಪಸ್ಸು ಹೋಗುವುದು ರೂಢಿಯಾಗಿ ಈಗ ಸ್ಟೇಷನ್ನಿನಲ್ಲಿ ಅರ್ಜಿ ಸಲ್ಲಿಸಲು ಜನರು ಭೀತರಾಗಿದ್ದಾರೆ. ಬೆಳಿಗ್ಗೆಯೇ ಕುಡಿದು ಅಮಲು ಮತ್ತರಾಗಿ ಕಾರು ಬಾಡಿಗೆ ಮಾಡಿಕೊಂಡು ಎಲ್ಲಾ ಗ್ರಾಮಗಳಿಗೆ ಸುತ್ತಾಡಿ ಹೋದಲ್ಲೆಲ್ಲಾ ಕಾರು ಬಾಡಿಗೆಯನ್ನು ಬಲಾತ್ಕಾರದಿಂದ ವಸೂಲಿ ಪಡೆದು ವಾಪಸ್ಸು ಬರುವುದು ಇವರ ರೂಢಿಯಾಗಿದೆ. ಇತ್ತೀಚೆಗೆ ನಮ್ಮ ತಾಲ್ಲೂಕಿನಲ್ಲಿ ಮ್ಯಾಜಿಸ್ಟ್ರೇಟ್ ಆಗಿದ್ದ ಶ್ರೀಧರ ಶೆಟ್ಟಿಯವರು ಸ್ಕೂಟರ್ ಅಪಘಾತದಲ್ಲಿ ಮೃತರಾದ ಸಂದರ್ಭ ಸದರಿ ಎಸ್.ಐ.ಯವರು ಕುಡಿದು ಅಮಲು ಮತ್ತರಾಗಿ ಆಸ್ಪತ್ರೆಗೆ ಬಂದು ಸಡೆಯಲಾಗದೆ ಬರೆಯಲು ಆಗದೆ, ಮಾತನಾಡಲೂ ಕೂಡ ಆಗದೆ ಜನರು ಚೀಮಾರಿ ಹಾಕಿದ್ದಾಯಿತು. ಅಲ್ಲದೇ ಅಂದಿನ ಎಲ್ಲಾ ರಿಕಾರ್ಡುಗಳನ್ನೂ ಹಾಗೂ ಮಹಜರುಗಳನ್ನು ಬೆಳ್ತಂಗಡಿ ಎಸ್.ಐ.ಯವರು ಮಾಡ ಬೇಕಾಯಿತು. ಸಾಯಂಕಾಲವಾದಂತೆ ಕುಡಿದು ತೂರಾಡಿಕೊಂಡು ಮಾರ್ಗದ ಬದಿಯಲ್ಲಿ ನಿಂತು ಮಾರ್ಗದಲ್ಲಿ ಹೋಗುವವರಿಗೆ ಅವಾಚ್ಯ ಶಬ್ದಗಳಿಂದ ಬೈದು ಅವರಿಂದಲೂ ಬೈಗಳನ್ನು ತಿಂದು ಸುಮ್ಮನಾಗುವ ದೃಶ್ಯ ಬಹಳ ನಾಚಿಕೆಗೇಡಿನದ್ದಾಗಿದೆ. ಈಗ ಅವರನ್ನು ಜನರೆಲ್ಲಾ ನೀಲಕಂಠ ಎಂದು ಕರೆಯುವುದರ ಬದಲಾಗಿ ''ತೇಲ್‌ಕಂಠ'' ಎಂದು ಕರೆಯುತ್ತಾರೆ. ಸದರಿಯವರನ್ನು ತಕ್ಷಣ ಅಮಾನತ್ತಿನಲ್ಲಿಟ್ಟು ಸೂಕ್ತ ತನಿಖೆ ನಡೆಸಿ ತಕ್ಕ ಕ್ರಮ ಕೈಗೊಂಡು ನ್ಯಾಯ ಕಾಪಾಡಬೇಕಾಗಿ ಈ ಮೂಲಕ ವಿನಂತಿಸುತ್ತಿದ್ದೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ ದಕ್ಷಿಣ ಕನ್ನಡ ಜಿಲ್ಲೆ ವೇಣೂರು ಪೋಲೀಸ್ ಠಾಣೆ ಯಲ್ಲಿ ಕೆಲಸ ಮಾಡುತ್ತಿರುವ ಶ್ರೀ ನೀಲಕಂಠ, ಸಬ್—ಇನ್ಸ್‌ಪೆಕ್ಟರ್, ಇವರ ಬಗ್ಗೆ ಎಸ್.ಪಿ.ಯವರಿಗೆ ಯಾವ ತರಹವಾದ ದೂರು ಬಂದಿಲ್ಲ. ಇವರು ಕುಡಿದ ಅಮಲಿನಲ್ಲಿ ವರ್ತಿಸುತ್ತಾರೆಂದು ಹಾಗೂ ಶ್ರೀ ಶ್ರೀಧರ ಶೆಟ್ಟಿಯವರ ಅಪಘಾತದ ಪ್ರಕರಣದ ಸಮಯದಲ್ಲಿ ಇವರು ಕುಡಿದಿದ್ದರು ಹಾಗೂ ಸಾರ್ವಜನಿಕರು ಛೀಮಾರಿ ಹಾಕಿದರೆಂದು ದೂರು ಬಂದಿಲ್ಲ. ಅರ್ಜಿದಾರರನ್ನು ಸ್ವತಃ ಬಾಡಿಗೆ ಕಾರು ಮಾಡಿಕೊಂಡು ಮುನ್ನೂರು ರೂಪಾಯಿಗಳನ್ನು ಕೊಡು ಎಂದು ಕೇಳಿದ ದೂರು ಸಹ ಬಂದಿಲ್ಲ. ಆದರೂ, ಮಾನ್ಯ ವಿಧಾನ ಸಭಾ ಸದಸ್ಯರು ಮಾಡಿರುವ ಆಪಾದನೆಗಳು ಉಗ್ರತರವಾದುದರಿಂದ ಆ ಕ್ಷೇತ್ರದ ಡಿ.ಎಸ್.ಪಿ. ಯವರನ್ನು ಈ ಬಗ್ಗೆ ಖುದ್ದು ವಿಚಾರಿಸಿ ಇನ್ನು ಹದಿನೈದು ದಿನಗಳೊಳಗಾಗಿ ವರದಿ ಕೊಡಬೇಕೆಂದು ಕೇಳಲಾಗಿದೆ. ವರದಿಯಲ್ಲಿ ಆಪಾದನೆಗಳು ಮೇಲ್ನೋಟಕ್ಕೆ ನಿಜವೆಂದು ಕಂಡುಬಂದರೆ ಸದರಿ ಸಬ್—ಇನ್ಸ್‌ಪೆಕ್ಟರ್ ಮೇಲೆ ಇಲಾಖಾ ಕ್ರಮವನ್ನು ಖಂಡಿತವಾಗಿ ತೆಗೆದುಕೊಳ್ಳ ಲಾಗುವುದು.

XVIII Non-release of salary grants to the aided institutions of Raichur, Gulbarga and Bidar Districts

SRI MALLIKARJUNA M. KHARGE (Gurumitkal).—Due to non-availability of funds with the DDPIs of Raichur. Gulbarga and